**ದಿನಾಂಕ:20-10-2022 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಕೆ.ಪಿ.ಹೆಚ್ ವಕೀಲರಿಂದ :**

ನನಗೆ ಸೇರಿದ ಜಮೀನಿನ ಸರ್ವೇ ನಂಬರ ನನಗೆ ನೆನಪಿಲ್ಲ. ನನ್ನ ಬಾಬತ್ತು ಜಮೀನಿನ ಮೇಲೆ ನಾನು ಯಾವುದೇ ಬೆಳೆ ಸಾಲ ತೆಗೆದುಕೊಂಡಿಲ್ಲ. ನನಗೆ ಹಿರೇಕೆರೂರಿನಲ್ಲಿ ಒಂದು

ಹಂಚಿನ ಮನೆ ಇದೆ. ನಾವು ಯಳ್ಳುರನಿಂದ ಹಾನಗಲ್ಲಗೆ ಬಂದಾಗ 2.00 ಗಂಟೆ ಸಮಯವಾಗಿತ್ತು. ನಾನು ಹಾನಗಲ್ಲಗೆ ಬಂದ ತಕ್ಷಣ ಒಬ್ಬ ಪತ್ರ ಬರಹಗಾರರನ್ನು ಭೇಟಿ ಮಾಡಿದೆನು, ಆದರೆ ಆತನ ಹೆಸರು ನನಗೆ ಗೊತ್ತಿಲ್ಲ. ಆ ದಿನ ಕಾಗದ ಪತ್ರಗಳು ಕಡಿಮೆ ಇದೆ ಎಂದು ಪ್ರತಿವಾದಿ ಹೇಳಿದ ಕಾರಣ ಎರಡು ದಿನಗಳ ನಂತರ ದಾಖಲೆ ಮಾಡಿರುತ್ತೇವೆ. ಆ ದಿನ ಯಾವ ಪತ್ರ ಕಡಿಮೆಯಾಗಿತ್ತು ಎಂಬುದನ್ನು ನಾನು ವಿಚಾರಿಸಿರುವುದಿಲ್ಲ ಬ್ಯಾಂಕ್ ನ ಪಿ.ಆರ್ ಅನ್ನು ಯಾರು ತಂದರು ಎಂಬುದನ್ನು ನನಗೆ ನೆನಪಿಲ್ಲ. ಆ ದಿನ ನಾನು ರೂ.16,00,000/– ಗಳನ್ನು ಕೊಟ್ಟೆನು. ಆ ಸಂದರ್ಭದಲ್ಲಿ ನನ್ನ ಬಳಿ ರೂ.17,00,000/– ಹಣ ಇತ್ತು. ಉಳಿದ ಒಂದು ಲಕ್ಷವನ್ನು ಕ್ರಯ ಪತ್ರ ಮಾಡುವ ಸಂದರ್ಭದಲ್ಲಿ ಕೊಡುವುದಾಗಿ ಒಪ್ಪಿ ವಾಪಸ ತಂದೆನು ಆದಿನ ಕೆಲವು ಕಾಗದ ಪತ್ರಗಳು ಇಲ್ಲದೇ ಇದ್ದ ಕಾರಣ ಕ್ರಯ ಪತ್ರ ಮಾಡಿಸಿಕೊಂಡಿರಲಿಲ್ಲ ಯಾವ ಕಾಗದ ಪತ್ರ ಇರಲಿಲ್ಲ ಎಂಬುದು ನನಗೆ ಮಾಹಿತಿ ಇಲ್ಲ ಈ ಹಿಂದೆ ಎಂದೂ ಸಹ ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ತೆಗೆಸಿ ನೋಡಿರುವುದಿಲ್ಲ. ಹಣ ಕೊಡುವುದಕ್ಕಿಂತ ಮೊದಲೇ 2–3 ಬಾರಿ ಮಾತುಕತೆಯಾಗಿತ್ತು. ಈ ಹಿಂದೆ ಮಾತುಕತೆಯೂ ಸಹ ಯಳ್ಳುರ ಗ್ರಾಮದಲ್ಲಿಯೇ ಆಗಿತ್ತು. ಪ್ರತಿವಾದಿಯರು ಉಮೇಶ ಸವಣೂರು ಎಂಬುವವರಿಂದ ರೂ.6 ಲಕ್ಷ ಹಣವನ್ನು ಸಾಲವಾಗಿ ಕೇಳಿದ್ದು, ಅವರು ನನ್ನನ್ನು ಹಣ ಕೊಡುವುದಾಗಿ ಹೇಳಿ ನನ್ನ ಬಳಿ ಪ್ರತಿವಾದಿಯರನ್ನು ಕಳುಹಿಸಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನಾನು ಪ್ರತಿವಾದಿಯರಿಗೆ ರೂ.6 ಲಕ್ಷ ಹಣವನ್ನು ಸಾಲವಾಗಿ ಕೊಟ್ಟೆನು ಎಂದರೆ ಸರಿಯಲ್ಲ. ಆ ಸಾಲದ ಭದ್ರತೆಗಾಗಿ ಒಂದು ಕಾಗದ ಪತ್ರ ಮಾಡಿಕೊಡುವಂತೆ ಪ್ರತಿವಾದಿಯರನ್ನು ಕೇಳಿದ್ದೇನೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ರೂ.6 ಲಕ್ಷದ ಭದ್ರತೆಗಾಗಿ ನಿ ಪಿ 1 ರಂತಹ ಕಾಗದ ಪತ್ರ ಮಾಡಿಕೊಟ್ಟರು ಎಂದರೆ ಸರಿಯಲ್ಲ 1 ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದ ಕಾರಣ ರೂ.6 ಲಕ್ಷ ಹಣ ಪಡೆದಿದ್ದು, ಈ ಬಗ್ಗೆ ನಿ ಪಿ 1 ರಂತಹ ದಾಖಲೆ ಬರೆದಿದ್ದು, ಅದಕ್ಕೆ 3 ನೇ ಪ್ರತಿವಾದಿ ಆ ದಾಖೆಯನ್ನು ಓದದೇ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ರೂ.6 ಲಕ್ಷಗಳ ಪೈಕಿ ಈಗಾಗಲೇ ರೂ.5 ಲಕ್ಷ ಹಣವನ್ನು ವಾಪಸ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿ ಪಿ 1 ರಲ್ಲಿ ರೂ.16 ಲಕ್ಷ ಪ್ರತಿವಾದಿಯರಿಗೆ ಹಣ ಕೊಟ್ಟ ಬಗ್ಗೆ ಬರೆದಿಲ್ಲ ಎಂದರೆ ಸರಿಯಲ್ಲ. ಕ್ರಯ ಕರಾರು ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇದೆ. ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಬಿಟ್ಟು ಬೇರೆ ಯಾವುದೇ ಆಸ್ತಿಗಳು ಇಲ್ಲ ಎನ್ನುವುದು ಸರಿ. ದಾವಾ ಆಸ್ತಿಯ ಮೌಲ್ಯ ಆ ಕಾಲಕ್ಕೆ ಒಂದು ಎಕರೆಗೆ ರೂ.15 ಲಕ್ಷ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯರು ತಮಗೆ ರೂ.6 ಲಕ್ಷದ ಅವಶ್ಯಕತೆ ಇದ್ದು, ಈ ಬಗ್ಗೆ ದಾಖಲೆ ಬರೆದುಕೊಡುವಂತೆ

ಕೇಳಿದ ಕಾರಣ ನಿಪಿ.1 ರಂತಹ ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ, ಬದಲಾಗಿ ಆ ಜಮೀನನ್ನು ಮಾರಾಟ ಮಾಡುವ ಯಾವುದೇ ಇಚ್ಚೆ ಪ್ರತಿವಾದಿಯರಿಗೆ ಇರಲಿಲ್ಲ ಎಂದರೆ ಸರಿಯಲ್ಲ.

: **ಮರುವಿಚಾರಣೆ** : **ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ